# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2022-23ನೇ ಸಾಲಿನಲ್ಲಿ ನಾಲ್ಕನೇ ಕಂತಿನ ಹಣ ಬಿಡುಗಡೆಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂ: ಆಇ 11 ಟಿಎಫ್‌ಪಿ 2007, ದಿ:27.11.2007.
2. ಸರ್ಕಾರದ ಆದೇಶ ಸಂಖ್ಯೆ:ಪಿಡಿ 14 ಐಎಂಎಂ 2017, ದಿ:23.03.2017.
3. ಅರೆ ಸರ್ಕಾರಿ ಪತ್ರ ಸಂ: ಪಿಡಿ 07 ಐಎಂಎಂ 2022, ದಿ:09.03.2022.
4. ಸರ್ಕಾರದ ಆದೇಶ ಸಂ: ಎಫ್‌ಡಿ 01 ಟಿಎಫ್‌ಪಿ 2022, ದಿ:04.04.2022,
5. ಸರ್ಕಾರದ ಆದೇಶ ಸಂ: ಎಫ್‌ಡಿ 01 ಟಿಎಫ್‌ಪಿ 2022, ದಿ:23.09.2022.

**ಪ್ರಸ್ತಾವನೆ:-**

ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳ ಮೂಲಕ ಆಡಳಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗುತ್ತಿದೆ.

ಇದರ ಜೊತೆಗೆ ಸಂಪನ್ಮೂಲಗಳ ಪರಿಷ್ಕೃತ ಅಂದಾಜುಗಳಿಗೆ ಮತ್ತು ಪೂರಕ ಅಂದಾಜು-1 ಮತ್ತು 2 ರಲ್ಲಿ ಅನುಮೋದನೆಯಾದ ಹೆಚ್ಚುವರಿ ಅನುದಾನಗಳ ಬಗ್ಗೆ ಸೂಕ್ತ ಗಮನ ನೀಡಬೇಕಾಗುತ್ತದೆ. ಇದಕ್ಕೆ ವೆಚ್ಚಗಳ ಮರು ಆದ್ಯತೆಯ ಅಗತ್ಯವಿದೆ. ಈ ಎಲ್ಲಾ ಅಂಶಗಳನ್ನು ಆಧರಿಸಿ ಯೋಜನೆಗಳಿಗೆ ಪರಿಷ್ಕೃತ ಅಂದಾಜು ತಯಾರಿಸಲಾಗಿದೆ. ಪರಿಷ್ಕೃತ ಅಂದಾಜುಗಳು ವಿತ್ತೀಯ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ, ಪರಿಷ್ಕೃತ ಅಂದಾಜುಗಳ ಮಿತಿಯೊಳಗೆ ಹಣ ಬಿಡುಗಡೆ ಮಾಡಲು ಆಡಳಿತ ಇಲಾಖೆಗಳಿಗೆ ಆರ್ಥಿಕ ಅಧಿಕಾರ ನೀಡುವುದು ಯುಕ್ತವಾಗಿರುತ್ತದೆ. ಆದ್ದರಿಂದ 4ನೇ ತ್ರೈಮಾಸಿಕ ಕಂತುಗಳನ್ನು ಸಹ ಬಿಡುಗಡೆ ಮಾಡಲು ಆಡಳಿತ ಇಲಾಖೆಗಳಿಗೆ ಆರ್ಥಿಕ ಅಧಿಕಾರವನ್ನು ನೀಡಲು ನಿರ್ಧರಿಸಲಾಗಿದೆ. ಹಾಗೆಯೇ, ಇಲಾಖೆಗಳು ಈ ಆರ್ಥಿಕ ಪ್ರತ್ಯಾಯೋಜನೆಯನ್ನು ಅದೇ ಉದ್ದೇಶ ಹಾಗೂ ಸ್ಫೂರ್ತಿಯಿಂದ ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಪ್ರತ್ಯಾಯೋಜನೆಯ ಉದ್ದೇಶವು, ಅನುದಾನದ ಪರಿಣಾಮಕಾರಿ ಬಳಕೆಯಾಗಿರುವುದರಿಂದ ಇಲಾಖೆಗಳು, ರಾಜ್ಯ ಯೋಜನೆಗಳು ಮತ್ತು ಇತರೆ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಮೊದಲು, ಕೆಲವು ಆಡಳಿತಾತ್ಮಕ ಪರಿಶೀಲನೆಗಳನ್ನು ಮಾಡುವುದು ಅವಶ್ಯವಾಗಿದೆ. ಆದುದರಿಂದ ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

ಈ ಆದೇಶವು, 2022-23ನೇ ಸಾಲಿನ ನಾಲ್ಕನೇ ತ್ರೈಮಾಸಿಕದಲ್ಲಿ ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚಗಳನ್ನು ಬಿಡುಗಡೆ ಮಾಡುವುದಕ್ಕೆ ಅನ್ವಯವಾಗುತ್ತದೆ. ಈ ಆದೇಶದಲ್ಲಿರುವ ಅಧಿಕಾರ ಪ್ರತ್ಯಾಯೋಜನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಚಲಾಯಿಸತಕ್ಕದ್ದೇ ಹೊರತು ಪುನರ್ ಪ್ರತ್ಯಾಯೋಜನೆ ಮಾಡತಕ್ಕದ್ದಲ್ಲ.

**ಸರ್ಕಾರದ ಆದೇಶ ಸಂ: ಎಫ್‌ಡಿ: 1 ಟಿಎಫ್‌ಪಿ: 2022, ದಿನಾಂಕ: 03.01.2023**

**ಭಾಗ- I ಆಡಳಿತಾತ್ಮಕ ಅನುಮೋದನೆ:**

1. ಒಂದು ಆರ್ಥಿಕ ವರ್ಷದಲ್ಲಿ ಮುಂದುವರಿದ ಅಥವಾ ಹೊಸ ಯೋಜನೆಗಳೆಂದು ಅನುಮೋದನೆಗೊಂಡಿರುವ ಯೋಜನೆಗಳಿಗೆ ಮಾತ್ರ ಹಣವನ್ನು ಬಿಡುಗಡೆಗೊಳಿಸಬಹುದಾಗಿದೆ. ಮೇಲೆ (2) ಮತ್ತು (3) ರಲ್ಲಿ ಉಲ್ಲೇಖಿಸಲಾದ ಆದೇಶ ಮತ್ತು ಅರೆಸರ್ಕಾರಿ ಪತ್ರಗಳಲ್ಲಿ ಹೊಸ ಅಂಶಗಳ ಸೇರ್ಪಡೆ ಅಥವಾ ಬದಲಾವಣೆ ಸೇರಿದಂತೆ ಮುಂದುವರೆದ ಯೋಜನೆಗಳ ಮತ್ತು ಹೊಸ ಯೋಜನೆಗಳ ಅನುಮೋದನೆಗೆ ಮತ್ತು ಉಸ್ತುವಾರಿಗೆ ವಿವರವಾದ ಮಾರ್ಗ ಸೂಚಿಗಳೊಂದಿಗೆ ಕಾರ್ಯವಿಧಾನಗಳನ್ನು ಯೋಜನಾ ಇಲಾಖೆಯು ಗೊತ್ತುಪಡಿಸಿದೆ. 2022-23 ನೇ ಸಾಲಿನಲ್ಲಿ ಯೋಜನಾ ಇಲಾಖೆಯು ಈ ಬಗ್ಗೆ ನೀಡಿದ ಮಾರ್ಗದರ್ಶನ/ಸೂಚನೆಗಳನ್ನು ಓದಿಕೊಳ್ಳಲು ತಿಳಿಸಿದೆ.
2. ಆಡಳಿತಾತ್ಮಕ ಅನುಮೋದನೆಯ ಆದೇಶವನ್ನು ಹಣ ಬಿಡುಗಡೆಯ ಆದೇಶವೆಂದು ಪರಿಭಾವಿಸತಕ್ಕದ್ದಲ್ಲ. ಅನುಮೋದನೆಯಾಗಿರುವ ವಿವಿಧ ಯೋಜನೆಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಣ ಬಿಡುಗಡೆ ಮಾಡುವ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಬೇಕಾಗುತ್ತದೆ.
3. ಕಾಮಗಾರಿ ಅಂದಾಜುಗಳ ಅನುಮೋದನೆಗೆ ರೂ.10.00 ಕೋಟಿಗಳವರೆಗೆ ಮತ್ತು ಸರಕು ಹಾಗೂ ಸೇವೆಗಳ ಸಂಗ್ರಹಣೆಗೆ ರೂ.10.00 ಕೋಟಿಗಳವರೆಗೆ ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಆಡಳಿತಾತ್ಮಕ ಅನುಮೋದನೆಯನ್ನು (ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸುವ ಷರತ್ತಿಗೊಳಪಟ್ಟು) ನೀಡಬಹುದಾಗಿದೆ.
4. ಆರ್ಥಿಕ ಇಲಾಖೆಯು ಈ ಕೆಳಕಂಡ ಅಂಶಗಳನ್ನಾಧರಿಸಿ ಉಳಿತಾಯವನ್ನು ಗುರುತಿಸಿದ ನಂತರ ಪ್ರತಿಯೊಂದು ಯೋಜನೆಗಳಡಿ ಪರಿಷ್ಕೃತ ಅಂದಾಜುಗಳನ್ನು ತಯಾರಿಸಿದೆ:

- ಸಂಭವನೀಯ ವೆಚ್ಚ
- ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಮುಂದುವರಿದ ಯೋಜನೆಗಳಲ್ಲಿರುವ ಬದ್ಧತೆಗಳನ್ನು ಹೊರತುಪಡಿಸಿ ಕೇಂದ್ರದ ಹಂಚಿಕೆ ಹಾಗೂ ಹಂಚಿಕೆ ಅನುಪಾತದ ಮಾದರಿ
- ಒಟ್ಟಾರೆ ವಿತ್ತೀಯ ಸ್ಥಿತಿ

**ಹಣ ಬಿಡುಗಡೆಗಾಗಿ ಈ ಕೆಳಗಿನಂತೆ ನೀಡಲಾಗಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಗಳನ್ನು ಪರಿಷ್ಕೃತ ಅಂದಾಜುಗಳ ಮಿತಿಯೊಳಗೆ ಕಟ್ಟು ನಿಟ್ಟಾಗಿ ಚಲಾಯಿಸತಕ್ಕದ್ದು.** ಯೋಜನೆಗಳಿಗೆ ಸಂಬಂಧಿಸಿದಂತೆ ಡಿಸೆಂಬರ್-2022 ರವರೆಗೆ ಆಗಿರುವ ವೆಚ್ಚಗಳನ್ನು ಹಾಗೂ ಪರಿಷ್ಕೃತ ಅಂದಾಜುಗಳನ್ನು ಆರ್ಥಿಕ ಇಲಾಖೆಯ ಸಂಬಂಧಪಟ್ಟ ವೆಚ್ಚ ಶಾಖೆಯಿಂದ ಆಡಳಿತ ಇಲಾಖೆಗೆ **ಅನಧಿಕೃತ ಟಿಪ್ಪಣಿ ಮೂಲಕ ತಿಳಿಸಲಾಗುವುದು.**

**ಪರಿಷ್ಕೃತ ಅಂದಾಜು ಮೀರಿ ಹಣ ಬಿಡುಗಡೆ ಮಾಡುವ ಅಗತ್ಯವಿದ್ದಲ್ಲಿ, ಆಡಳಿತ ಇಲಾಖೆಯು ಸಮರ್ಥನೆಯೊಂದಿಗೆ ಹಣ ಬಿಡುಗಡೆ ಮಾಡಲು ಕೋರಿಕೆ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸಬೇಕಾಗುತ್ತದೆ.**

**ಭಾಗ- II ಹಣ ಬಿಡುಗಡೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯಿಂದ ನಿರ್ದಿಷ್ಟವಾಗಿ ಅನುಮೋದನೆ ಪಡೆಯಬೇಕಾಗಿರುವ ಪ್ರಕರಣಗಳು:**

5. ಈ ಆದೇಶದ ಅನುಬಂಧ-1 ರಲ್ಲಿ ವರ್ಗೀಕರಿಸಲಾಗಿರುವ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಇನ್ನುಳಿದ ಯೋಜನೆಗಳಿಗೆ, ಕೆಳಗೆ ವಿವರಿಸಿದಂತೆ ಅಧಿಕಾರ ಪ್ರತ್ಯಾಯೋಜನೆ ಅನ್ವಯವಾಗುತ್ತದೆ.

**ಷೇರು ಬಂಡವಾಳ ಹೂಡಿಕೆ ಮತ್ತು ಸಾಲಗಳು:**

6. ಕರ್ನಾಟಕ ಸರ್ಕಾರದ (ವ್ಯವಹಾರಗಳ ನಿರ್ವಹಣೆ) ನಿಯಮಗಳು, 1977ರಲ್ಲಿ ವಿಧಿಸಿರುವ ನಿಯಮಗಳನ್ನು ಮತ್ತು ಆರ್ಥಿಕ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂ:ಎಫ್‌ಡಿ: 1 ಬಿಎಲ್‌ಎ 2013, ದಿ:26.11.2013ರಲ್ಲಿನ ಸೂಚನೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಹಾಗೂ ಆಡಳಿತ ಇಲಾಖೆಗಳು ಇದುವರೆಗೆ ಬಿಡುಗಡೆಯಾಗಿರುವ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯನ್ನು ಮೀರದಿರುವುದನ್ನು ಹಾಗೂ ಷೇರು ಬಂಡವಾಳದ ರಾಜ್ಯದ ಪಾಲು ಷೇರುದಾರರ ಒಪ್ಪಂದದ ಪ್ರಕಾರ ಇರುವುದನ್ನು ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟು ರೂ.10.00 ಕೋಟಿಯೊಳಗೆ ಆಯವ್ಯಯ ಅನುದಾನ ಲಭ್ಯವಿದ್ದಲ್ಲಿ, ಆಯವ್ಯಯ ಅವಕಾಶದವರೆಗೆ, (RE) ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಷೇರು ಬಂಡವಾಳವನ್ನು ಒಂದು ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಬಹುದಾಗಿದೆ. ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರದ ಷೇರು ಬಂಡವಾಳವನ್ನು ಆಯವ್ಯಯ ಅಂದಾಜುಗಳ (ಪರಿಷ್ಕೃತ ಅಂದಾಜು) ವರೆಗೆ ಆರ್ಥಿಕ ಇಲಾಖೆಯ ಅನುಮೋದನೆ ಇದೆ ಎಂದು ಭಾವಿಸಿ ಬಿಡುಗಡೆ ಮಾಡಬಹುದಾಗಿದೆ. ಒಂದು ವರ್ಷದಲ್ಲಿ ರೂ.10.00 ಕೋಟಿಗಿಂತ ಹೆಚ್ಚಿನ ಷೇರು ಬಂಡವಾಳವನ್ನು ಹಾಗೂ ಎಷ್ಟೇ ಮೊತ್ತದ ಸಾಲವನ್ನಾಗಲೀ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಪಡೆಯಬೇಕಾಗುತ್ತದೆ.

**ಭಾಗ- III ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಹಣ ಬಿಡುಗಡೆ ಮಾಡಬಹುದಾದ ಪ್ರಕರಣಗಳು:**

7. **ಅನುಬಂಧ-2** ರಲ್ಲಿ ಪಟ್ಟಿ ಮಾಡಲಾದ ಬಾಬ್ತುಗಳಿಗೆ ಸಂಬಂಧಿಸಿದಂತೆ, ಪರಿಷ್ಕೃತ ಅಂದಾಜಿನ ಮಿತಿಯೊಳಗೆ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಹಣವನ್ನು ಬಿಡುಗಡೆ ಮಾಡಬಹುದಾಗಿದೆ. ಅನುಬಂಧ-2 ರಲ್ಲಿ ಪಟ್ಟಿ ಮಾಡಿರದ ಲೆಕ್ಕ ಶೀರ್ಷಿಕೆ/ಯೋಜನೆಗಳಿಗೆ ಈ ಆದೇಶದ ಕಂಡಿಕೆ ೯ ರಿಂದ ಮುಂದಿನ ಕಂಡಿಕೆಗಳನ್ನು ಸಂದರ್ಭಾನುಸಾರ ಅನ್ವಯಿಸಿ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಖಜಾನೆ-2 ಅನುಷ್ಠಾನಗೊಂಡಿರುವುದರಿಂದ ಆಯವ್ಯಯ ಲಭ್ಯತೆ ಇಲ್ಲದಿದ್ದಲ್ಲಿ ಅನುದಾನವನ್ನು ಸೆಳೆಯಲಾಗುವುದಿಲ್ಲವಾದ್ದರಿಂದ, ಆಡಳಿತ ಇಲಾಖೆಗಳು ಪ್ರತಿ ತಿಂಗಳೂ ವೆಚ್ಚಗಳ ಮೇಲ್ವಿಚಾರಣೆ ನಡೆಸಿ ಅಗತ್ಯವಾದಲ್ಲಿ ಸೂಕ್ತ ಸಮಯದೊಳಗೆ ಪೂರಕ ಅಂದಾಜುಗಳಲ್ಲಿ ಅನುದಾನ ಒದಗಿಸಲು ಅಥವಾ ಪುನರ್ವಿನಿಯೋಗದ ಮೂಲಕ ಒದಗಿಸಿಕೊಳ್ಳಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಬಹುದಾಗಿದೆ.

8. 2022-23ನೇ ಸಾಲಿಗೆ ವಿವಿಧ ಯೋಜನೆಗಳಡಿ ಕಾಮಗಾರಿಗಳಿಗೆ ಒದಗಿಸಿರುವ ಆಯವ್ಯಯದಲ್ಲಿ Balance Cost of Workಗೆ ಸಂಬಂಧಿಸಿದ ಮೊತ್ತವನ್ನು ಬಿಡುಗಡೆ ಮಾಡಲು ಆದ್ಯತೆ ನೀಡುವುದು.

**ನಾಲ್ಕನೇ ತ್ರೈಮಾಸಿಕದಲ್ಲಿ ಮಾಸಿಕ ಹಣ ಬಿಡುಗಡೆಗಳು:**

೯. **ಈ ಆದೇಶದಲ್ಲಿ ತಿಳಿಸಿದ ಇತರೆ ಯೋಜನೆಗಳ ಬಗ್ಗೆ ಯಾವುದೇ ವಿಧಾನಗಳನ್ನು ತಿಳಿಸಿದ್ದರೂ ಸಹ ಈ ಕೆಳಗೆ ತಿಳಿಸಲಾದ ಯೋಜನೆಗಳಿಗೆ ಆರಂಭದ ಶಿಲ್ಕು ಸೇರಿದಂತೆ ಶೇ.75% ರಷ್ಟು ಉಪಯೋಗಿಸಿಕೊಂಡಿದ್ದಲ್ಲಿ ಮಾತ್ರ "RE ಯಲ್ಲಿ ಡಿಸೆಂಬರ್ 31ರೊಳಗೆ ಬಿಡುಗಡೆ ಮಾಡಿದ ಹಣ" ವನ್ನು ಕಳೆದು, ಆ ಮೊತ್ತದ ಮೂರನೇ ಒಂದು ಭಾಗವನ್ನು ಪ್ರತಿ ತಿಂಗಳೂ 2022-23ನೇ ಸಾಲಿನ 4ನೇ ತ್ರೈಮಾಸಿಕದಲ್ಲಿ ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಬಿಡುಗಡೆ ಮಾಡಬಹುದಾಗಿದೆ.**

(ಎ) ಅನುಬಂಧ-1 ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಲೋಕೋಪಯೋಗಿ ಇಲಾಖೆಯ ಎಲ್ಲಾ ಯೋಜನೆಗಳು

(ಬಿ) ಅನುಬಂಧ-1 ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಅನುಮೋದಿಸಲಾದ ಯೋಜನೆ ಪ್ರಕಾರ ಹೆಚ್ಚುವರಿ ಆಯವ್ಯಯ ಸಂಪನ್ಮೂಲ (ಇಬಿಆರ್) ಗಳನ್ನು ಸಂಗ್ರಹಿಸುವುದಕ್ಕೆ ಒಳಪಟ್ಟು ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿಯ ಎಲ್ಲಾ ಯೋಜನೆಗಳು.

ಮೇಲೆ (ಎ) ಮತ್ತು (ಬಿ) ರಲ್ಲಿರುವ ಎಸ್‌ಸಿಎಸ್‌ಪಿ-ಟಿಎಸ್‌ಪಿ ಯೋಜನೆಗಳಿಗೆ(ಎಸ್‌ಸಿಎಸ್‌ಪಿ-ಟಿಎಸ್‌ಪಿ) ಹಿಂದಿನ ತಿಂಗಳುಗಳಲ್ಲಿ ಬಿಡುಗಡೆ ಮಾಡಿರುವ ಅನುದಾನಗಳಲ್ಲಿ ಬಳಕೆಯಾಗದೇ ಉಳಿದ ಅನುದಾನವೂ ಸೇರಿದಂತೆ ಹನ್ನೆರಡನೇ ಒಂದು ಭಾಗವನ್ನು ಪ್ರತಿ ತಿಂಗಳೂ ಸಹ ಬಿಡುಗಡೆ ಮಾಡಬಹುದಾಗಿದೆ.

**(ಸಿ) ಸಾರಿಗೆ ನಿಗಮಗಳಿಗೆ ಸಹಾಯಧನ:**

ಎಲ್ಲಾ ನಾಲ್ಕು ಸಾರಿಗೆ ನಿಗಮಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಮಾಡಬೇಕಾದ ಮೋಟಾರು ವಾಹನಗಳ ತೆರಿಗೆಯನ್ನು ಲೆಕ್ಕ ಹಾಕಿ ಕಡತದಲ್ಲಿ ಆರ್ಥಿಕ ಇಲಾಖೆಯಿಂದ ತಿಳಿಸಲಾಗಿದೆ. (ಪರಿಷ್ಕೃತ ಅಂದಾಜು-ಹೊಂದಾಣಿಕೆ ಮಾಡಬೇಕಾದ ಮೊತ್ತ) ಇದರಲ್ಲಿ ಡಿಸೆಂಬರ್ ತಿಂಗಳವರೆಗೆ ಬಿಡುಗಡೆ ಮಾಡಿರುವ ಹಣವನ್ನು ಕಳೆದು ಉಳಿದ ಮೊತ್ತವನ್ನು ಮೂರು ಸಮ ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ.

10. **ಆಹಾರ ಸಹಾಯಧನ:** ಪರಿಷ್ಕೃತ ಅಂದಾಜುಗಳಲ್ಲಿ, ಡಿಸೆಂಬರ್ ವರೆಗಿನ ಬಿಡುಗಡೆಗಳನ್ನು ಕಳೆದು ಉಳಿದ ಮೊತ್ತವನ್ನು ಅವಶ್ಯಕತೆಗಳಿಗನುಸಾರ ಬಿಡುಗಡೆ ಮಾಡಬಹುದಾಗಿದೆ.

11. ಐ.ಪಿ. ಸೆಟ್ಟುಗಳು, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಇವುಗಳಿಗೆ ಬಿಡುಗಡೆ ಮಾಡಬೇಕಾದ ಸಬ್ಸಿಡಿ ಹಣದ ಮಾಸಿಕ ಮಿತಿಯನ್ನು ಆರ್ಥಿಕ ಇಲಾಖೆಯಿಂದ ಇಂಧನ ಇಲಾಖೆಗೆ ಕಡತದಲ್ಲಿ ತಿಳಿಸಲಾಗುವುದು.

**ನಾಲ್ಕನೇ ತ್ರೈಮಾಸಿಕ ಅವಧಿಯಲ್ಲಿ ನಾಲ್ಕನೇ ಕಂತಿನ ಹಣ ಬಿಡುಗಡೆ:**

**31ನೇ ಡಿಸೆಂಬರ್ 2022ರ ಅಂತ್ಯಕ್ಕೆ, ವೆಚ್ಚವು ಬಿಡುಗಡೆ ಮಾಡಿರುವ ಮೊತ್ತದ ಶೇಕಡಾ 75 ಕ್ಕಿಂತ ಹೆಚ್ಚಾಗಿದ್ದಲ್ಲಿ:**

12. ಇನ್ನಿತರ ಯೋಜನೆಗಳಿಗೆ ಸಂಬಂಧಿಸಿದಂತೆ, ಯೋಜನೆ ಜಾರಿಗೊಳಿಸುವ ಏಜೆನ್ಸಿಯಲ್ಲಿರುವ ಆರಂಭಿಕ ಶಿಲ್ಕು ಅಥವಾ ವೈಯಕ್ತಿಕ ಠೇವಣಿ ಖಾತೆಯಲ್ಲಿನ ಮೊತ್ತವೂ ಸೇರಿದಂತೆ ಈಗಾಗಲೇ ಮೊದಲ ಮೂರು ತ್ರೈಮಾಸಿಕಗಳಲ್ಲಿ ಬಿಡುಗಡೆ ಮಾಡಿರುವ ಹಣದಲ್ಲಿ ಶೇ. 75ರಷ್ಟು ಹಣವನ್ನು ಉಪಯೋಗಿಸಿದ್ದಲ್ಲಿ ನಾಲ್ಕನೇ ತ್ರೈಮಾಸಿಕ ಕಂತಿನಲ್ಲಿ ಉಳಿದಿರುವ ಆಯವ್ಯಯದ ಅವಕಾಶವನ್ನು ಪರಿಷ್ಕೃತ ಅಂದಾಜಿನವರೆಗೆ ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಬಿಡುಗಡೆ ಗೊಳಿಸಬಹುದಾಗಿದೆ. ಬಿಡುಗಡೆ ಮಾಡಿರುವ ಹಣವನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಹಾಗೂ ಈಗ ಬಿಡುಗಡೆ ಮಾಡಬೇಕಾಗಿರುವ ಅಗತ್ಯತೆ ಬಗ್ಗೆ ವಿವರಗಳನ್ನು ಬಿಡುಗಡೆ ಆದೇಶದಲ್ಲಿ ಆಡಳಿತ ಇಲಾಖೆಗಳು ನಮೂದಿಸುವುದು. **ಆದರೆ ಬಹಳಷ್ಟು ಆಡಳಿತ ಇಲಾಖೆಗಳು ಈ ಆದೇಶದಂತೆ ಹಿಂದಿನ ಮೂರು ತ್ರೈಮಾಸಿಕಗಳಲ್ಲಿ ಬಿಡುಗಡೆ ಮಾಡಿದ ಹಣದಲ್ಲಿ ಶೇ.75 ರಷ್ಟು ವೆಚ್ಚ ಮಾಡದಿದ್ದರೂ ಹಣ ಬಿಡುಗಡೆ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಆದ್ದರಿಂದ, ಆಡಳಿತ ಇಲಾಖೆಗಳು ಹಣ ಬಿಡುಗಡೆ**

ಮಾಡುವಾಗ ಅನುಷ್ಠಾನಗೊಳಿಸುವ ಏಜೆನ್ಸಿಗಳ (ನಿಗಮ/ಮಂಡಳಿಗಳು, ಮತ್ತಿತರ ಸಂಸ್ಥೆಗಳು/ ಇಲಾಖಾಧಿಕಾರಿಗಳು) ಹೆಸರಿನಲ್ಲಿ ಇರುವ ಪಿಡಿ ಖಾತೆ/ಬ್ಯಾಂಕ್ ಖಾತೆಗಳಲ್ಲಿರುವ ಮೊತ್ತವನ್ನು ಖಜಾನೆಯ NTT Module ನಲ್ಲಿ ಪರಿಶೀಲಿಸುವಂತೆ ತಿಳಿಸಲಾಗಿದೆ.**

**31ನೇ ಡಿಸೆಂಬರ್ 2022ರ ಅಂತ್ಯಕ್ಕೆ ವೆಚ್ಚವು ಬಿಡುಗಡೆ ಮಾಡಿರುವ ಮೊತ್ತದ ಶೇಕಡಾ 25 ಕ್ಕಿಂತ ಕಡಿಮೆಯಿದ್ದಲ್ಲಿ:**

13. **(ಎ)** ಆಡಳಿತ ಇಲಾಖೆಯು ಮೊದಲ ಮೂರು ತ್ರೈಮಾಸಿಕಗಳಲ್ಲಿ ಯಾವುದೇ ಮೊತ್ತವನ್ನು ಬಿಡುಗಡೆ ಮಾಡದಿದ್ದರೆ, ಅಂತಹ ಸಂದರ್ಭಗಳಲ್ಲಿ ಆಡಳಿತ ಇಲಾಖೆಯು ಆಯವ್ಯಯ ಅಂದಾಜು ಅಥವಾ ಪರಿಷ್ಕೃತ ಅಂದಾಜುಗಳ ಶೇ.30 ವರೆಗೆ ಬಿಡುಗಡೆ ಮಾಡಬಹುದು. ಆದರೆ ಮೊದಲ ಮೂರು ತ್ರೈಮಾಸಿಕಗಳಲ್ಲಿ ಬಿಡುಗಡೆಯಾದ ಮೊತ್ತದಲ್ಲಿ ವೆಚ್ಚವು ಶೇ.25 ಕ್ಕಿಂತ ಕಡಿಮೆಯಿದ್ದರೆ, ಆಯವ್ಯಯ ಅಂದಾಜಿನ/ಪರಿಷ್ಕೃತ ಅಂದಾಜಿನ ಶೇ.50ರಷ್ಟನ್ನು ಮಾತ್ರ ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಬಹುದು. ಆದರೆ, ಒಟ್ಟು ಬಿಡುಗಡೆಯು ಆಯವ್ಯಯ ಅಂದಾಜಿನ/ಪರಿಷ್ಕೃತ ಅಂದಾಜಿನ ಶೇ.50ರಷ್ಟನ್ನು ಮೀರುವಂತಿಲ್ಲ.

    **(ಬಿ) ಆಯವ್ಯಯ ಅಂದಾಜಿನ/ಪರಿಷ್ಕೃತ ಅಂದಾಜಿನ ಶೇ.50 ಕ್ಕಿಂತ ಹೆಚ್ಚು ಮೊತ್ತವನ್ನು ಬಿಡುಗಡೆ ಮಾಡಬೇಕಾದಲ್ಲಿ ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ.** ಯಾವುದೇ ಸಂದರ್ಭದಲ್ಲಿಯೂ ಒಟ್ಟಾರೆ ಬಿಡುಗಡೆಯು ಪೂರಕ ಅಂದಾಜುಗಳು ಸೇರಿ ಆಯವ್ಯಯ ಅಂದಾಜನ್ನು (ಅಥವಾ ಪರಿಷ್ಕೃತ ಅಂದಾಜುಗಳು) ಮೀರುವಂತಿಲ್ಲ. ಉದ್ದೇಶಿತ ಫಲಿತಾಂಶಗಳಿಲ್ಲದೆ ಕೇವಲ ವೆಚ್ಚಗಳ ಕೃತಕ ಹೆಚ್ಚಳ ಹಾಗೂ ಕೊನೆಯ ಕ್ಷಣದಲ್ಲಿ ಅನಗತ್ಯವಾಗಿ ಠೇವಣಿ ಅಥವಾ ಬ್ಯಾಂಕ್ ಖಾತೆಯಲ್ಲಿ ಇರಿಸುವುದನ್ನು ಇದರಿಂದ ತಪ್ಪಿಸಬಹುದಾಗಿದೆ. ಆದರೆ ಈ ನಿರ್ಬಂಧವು ಪ.ಜಾ.ಉ.ಯೋ / ಗಿ.ಉ.ಯೋ ಅನುದಾನಗಳಿಗೆ ಅನ್ವಯಿಸುವುದಿಲ್ಲ.

**ಸಾಲ ಸೇವೆಗಳು:**

14. ಆಯವ್ಯಯದ ಹಣದ ಲಭ್ಯತೆಗೆ ಒಳಪಟ್ಟು ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಪೂರ್ಣ ಆರ್ಥಿಕ ವರ್ಷದಲ್ಲಿ ಸಾಲ ಪಾವತಿಗಾಗಿ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಬಹುದಾಗಿದೆ.

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣ ಬಿಡುಗಡೆ:**

**ರಾಜ್ಯ ಯೋಜನೆಗಳು:**

15. ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲು ಪ್ರಸ್ತುತ ಆರ್ಥಿಕ ಇಲಾಖೆಯು ಅನುಸರಿಸುತ್ತಿರುವ ಪದ್ಧತಿಯೇ ಮುಂದುವರಿಯುತ್ತದೆ.

**ಜಿಲ್ಲಾ ವಲಯಕ್ಕೆ ಸಂಬಂಧಿಸಿದ ಕೇಂದ್ರ ಪುರಸ್ಕೃತ ಯೋಜನೆಗಳು:**

16. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಮುಂದೆ ಕಂಡಿಕೆ 26 ರಿಂದ ತಿಳಿಸಿರುವ ವಿಧಾನಗಳು ಅನ್ವಯವಾಗುತ್ತವೆ. ಜಿಲ್ಲಾ ವಲಯದ ಕೇಂದ್ರ ಪುರಸ್ಕೃತ ಯೋಜನೆಗಳನ್ನು **ಅನುಬಂಧ-3** ರಲ್ಲಿ ಪಟ್ಟಿ ಮಾಡಿದೆ. ಈ ಲೆಕ್ಕಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಆಡಳಿತ ಇಲಾಖೆಗಳೇ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

17. ಜಿಲ್ಲಾ ಪಂಚಾಯತ್ ಲಿಂಕ್ ಪುಸ್ತಕದಲ್ಲಿ ಕೆಲವು ಯೋಜನೆಗಳಿಗೆ ಒಟ್ಟಾರೆಯಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ 300 ರಡಿಯಲ್ಲಿ ಆಯವ್ಯಯ ಅವಕಾಶ ಮಾಡಲಾಗಿದೆ. ಆದರೆ, ಅನುಬಂಧ-1 ಅಡಿ ಪಟ್ಟಿ ಮಾಡಲಾದ 300-lumpsum ಅಡಿ ಒದಗಿಸಲಾದ ಯೋಜನೆಗಳಿಗೆ ಬಿಡುಗಡೆ ಮಾಡುವಾಗ ಆರ್ಥಿಕ ಇಲಾಖೆಯ ಅನುಮೋದನೆ ಪಡೆದೇ ಮಾಡತಕ್ಕದ್ದು. ಉದ್ದೇಶಿತ ಲೆ.ಶೀ.300 ರಡಿ ಒದಗಿಸಿದ ಇತರ ಯೋಜನೆಗಳಿಗೆ ಆಡಳಿತ ಇಲಾಖೆಯೇ ಬಿಡುಗಡೆ ಮಾಡಬಹುದಾಗಿದೆ. ಇದು ರಾಜ್ಯ ಯೋಜನೆಗಳು, ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಒಳಗೊಂಡಿರುತ್ತದೆ. ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಕಂಡಿಕೆ 12 ಹಾಗೂ 13 ರಲ್ಲಿ ತಿಳಿಸಿರುವ ವಿಧಾನಗಳನ್ನನುಸರಿಸಿ ಬಿಡುಗಡೆ ಮಾಡಬೇಕಾಗುತ್ತದೆ. ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಆಡಳಿತ ಇಲಾಖೆಗಳು ಆಯಾ ಯೋಜನೆಗಳಡಿ ಮಾಡುವ ಬಿಡುಗಡೆಗೆ ಅನುಗುಣವಾಗಿ SCSP ಹಾಗೂ TSP ಗೆ ಸಂಬಂಧಪಟ್ಟಂತೆ ಸಹಾ ಬಿಡುಗಡೆ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.

18. ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಆಡಳಿತ ಇಲಾಖೆಗಳು ಆಯಾ ಯೋಜನೆಗಳಡಿ ಮಾಡುವ ಬಿಡುಗಡೆಗೆ ಅನುಗುಣವಾಗಿ SCSP ಹಾಗೂ TSP ಗೆ ಸಂಬಂಧಪಟ್ಟಂತೆ ಸಹಾ ಬಿಡುಗಡೆ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು.

**ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ:**

19. ಅನುಬಂಧ-1 ಮತ್ತು 1-ಎ ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ, ಯೋಜನೆಗಳನ್ನು ಜಾರಿಗೊಳಿಸುವ ಏಜನ್ಸಿಗಳ ಖಾತೆಯಲ್ಲಿ ಅಥವಾ ಪಿ. ಡಿ ಖಾತೆಯಲ್ಲಿರುವ ಆರಂಭಿಕ ಶಿಲ್ಕು ಸೇರಿದಂತೆ ಈವರೆಗೆ ಬಿಡುಗಡೆ ಮಾಡಿರುವ ಹಣದಲ್ಲಿ ಶೇ.75 ರಷ್ಟು ಹಣವನ್ನು ಉಪಯೋಗಿಸಿಕೊಂಡಿದ್ದಲ್ಲಿ ಮಾತ್ರ, ಆಯವ್ಯಯ/ ಪರಿಷ್ಕೃತ ಅಂದಾಜಿನ ಶೇ.25ರಷ್ಟು ಮೊತ್ತವನ್ನು ನಾಲ್ಕನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಬಹುದಾಗಿದೆ. ಬಿಡುಗಡೆ ಮಾಡಿರುವ ಹಣವನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಹಾಗೂ ಈಗ ಬಿಡುಗಡೆ ಮಾಡಬೇಕಾಗಿರುವ ಅಗತ್ಯತೆ ಬಗ್ಗೆ ವಿವರಗಳನ್ನು ಬಿಡುಗಡೆ ಆದೇಶದಲ್ಲಿ ಆಡಳಿತ ಇಲಾಖೆಗಳು ನಮೂದಿಸುವುದು.

20. ರಾಜ್ಯದ ಕಾರ್ಯಕ್ರಮಗಳಿಗೆ ಯೋಜನಾನುದಾನಗಳನ್ನು ಬಿಡುಗಡೆ ಮಾಡುವಾಗ ಕಂಡಿಕೆ 12 ಹಾಗೂ 13 ರಲ್ಲಿ ತಿಳಿಸಿರುವ ಅಧಿಕಾರ ಪ್ರತ್ಯಾಯೋಜನೆ ಮತ್ತು ವಿಧಾನಗಳು ಅನ್ವಯವಾಗುತ್ತವೆ. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದಂತೆ ಕಂಡಿಕೆ 26 ರಿಂದ ಮುಂದೆ ತಿಳಿಸಿರುವ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ.

21. ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ ಮಾಡುವಾಗ, ನಗರಾಭಿವೃದ್ಧಿ ಇಲಾಖೆಯು ಲಿಂಕ್ ಡಾಕ್ಯುಮೆಂಟ್‌ನಲ್ಲಿ ಮಾಡಿರುವ ಹಂಚಿಕೆಗಳನ್ನು ಹಣ ಬಿಡುಗಡೆ ಆದೇಶದಲ್ಲಿ ನಮೂದಿಸಿ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಬೇಕಾಗುತ್ತದೆ.

**ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ. ಹಣದ ಬಿಡುಗಡೆ:**

22. ಕರ್ನಾಟಕ ಅನುಸೂಚಿತ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಅಧಿನಿಯಮ, 2013ರ ಪ್ರಕಾರ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ. ಅಡಿಯಲ್ಲಿ ಆಯವ್ಯಯ/ಪರಿಷ್ಕೃತ ಅಂದಾಜಿನ ಶೇ. 25 ರಷ್ಟು ಮೊತ್ತವನ್ನು 4ನೇ ತ್ರೈಮಾಸಿಕ ಅವಧಿಯಲ್ಲಿ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆಡಳಿತ ಇಲಾಖೆಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ:

(ಅ) ಹಿಂದಿನ ಬಿಡುಗಡೆಗಳಲ್ಲಿ ಶೇ.75ರ ಬಳಕೆಯನ್ನು ಖಾತರಿ ಪಡಿಸಿಕೊಂಡು, ಕಂಡಿಕೆ 9 (ಎ) ಮತ್ತು (ಬಿ)ಯಲ್ಲಿ ಪಟ್ಟಿಯಾದ ಕಾರ್ಯಕ್ರಮಗಳಿಗೆ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ. ಅನುದಾನವನ್ನು ಆಯವ್ಯಯ/ಪರಿಷ್ಕೃತ ಅಂದಾಜಿನ ಶೇ. 25 ರಷ್ಟು ಮೊತ್ತವನ್ನು ಮೂರು ಸಮಾನ ಕಂತುಗಳಲ್ಲಿ ಪ್ರತಿ ತಿಂಗಳು ಜನವರಿ 2023 ರಿಂದ ಮಾರ್ಚ್ 2023 ರವರೆಗೆ ಬಿಡುಗಡೆ ಮಾಡುವುದು.

(ಆ) ಇತರೆ ಯೋಜನೆಗಳಿಗೆ ಹಿಂದಿನ ಬಿಡುಗಡೆಗಳಲ್ಲಿ ಶೇ.75ರಷ್ಟು ಬಳಕೆಯನ್ನು ಖಾತರಿ ಪಡಿಸಿಕೊಂಡು, ಕಂಡಿಕೆ 12 & 13 ರಂತೆ ಇಲಾಖೆಗಳು ಮೊದಲ 3 ತ್ರೈಮಾಸಿಕದಲ್ಲಿ ಬಿಡುಗಡೆಯಾಗದ ಅನುದಾನವನ್ನು ಹಾಗೂ ಆಯವ್ಯಯ/ಪರಿಷ್ಕೃತ ಅಂದಾಜಿನ ಶೇ.25 ರಷ್ಟು ಮೊತ್ತವನ್ನು 4ನೇ ತ್ರೈಮಾಸಿಕ ಅವಧಿಯಲ್ಲಿ ಬಿಡುಗಡೆ ಮಾಡುವುದು.

(ಇ) ಪ.ಜಾ.ಉ.ಯೋ ಹಾಗೂ ಗಿ.ಉ.ಯೋ. ಅಡಿಯಲ್ಲಿ ಹಣವನ್ನು ಸೆಳೆದು ನಿಗಮ/ಮಂಡಳಿ ಹಾಗೂ ಇಲಾಖಾ ಮುಖ್ಯಸ್ಥರ ಪಿ.ಡಿ. ಖಾತೆ ಅಥವಾ ಬ್ಯಾಂಕ್ ಖಾತೆಗಳಲ್ಲಿಡುತ್ತಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಸಂಬಂಧಪಟ್ಟ ಆಡಳಿತ ಇಲಾಖೆ ಕಾರ್ಯದರ್ಶಿಗಳು ಪ.ಜಾ.ಉ.ಯೋ ಹಾಗೂ ಗಿ.ಉ.ಯೋ ಅಡಿಯಲ್ಲಿ ಹಣ ಬಿಡುಗಡೆ ಮಾಡುವಾಗ ಬ್ಯಾಂಕ್ ಅಥವಾ ಪಿ.ಡಿ. ಖಾತೆಯಲ್ಲಿ ಮಾರ್ಚ್ 2022ರ ಆರಂಭದಲ್ಲಿದ್ದ ಶಿಲ್ಕು ಸೇರಿದಂತೆ ಮೊದಲ ಎರಡು ಕಂತಿನಲ್ಲಿ ಬಿಡುಗಡೆ ಮಾಡಿದ ಹಣದಲ್ಲಿ ಶೇ. 75 ರಷ್ಟು

ಉಪಯೋಗವಾಗಿರುವುದನ್ನು ಖಚಿತ ಪಡಿಸಿಕೊಳ್ಳಲು ತಿಳಿಸಿದೆ. ಆಡಳಿತ ಇಲಾಖೆಗಳು ಅವಶ್ಯಕತೆಗನುಸಾರ ಮಾತ್ರ ಹಣ ಸೆಳೆಯುವುದನ್ನು ಖಚಿತಪಡಿಸಿಕೊಳ್ಳುವುದು. ಅನುದಾನಗಳು ವ್ಯಪಗತವಾಗುವುದನ್ನು ತಪ್ಪಿಸಲು ಹಣವನ್ನು ಸೆಳೆದು ಅನಗತ್ಯವಾಗಿ ಬ್ಯಾಂಕ್ ಮತ್ತು ವೈಯಕ್ತಿಕ ಠೇವಣಿ ಖಾತೆಗಳಲ್ಲಿಡುವಂತಿಲ್ಲ.

**ವೆಚ್ಚ ಹಿಂಬರಿಸಬಹುದಾದ ಯೋಜನೆಗಳು**

**ಎ) ಬಾಹ್ಯ ನೆರವಿನ ಯೋಜನೆಗಳು**

23. **ಅನುಬಂಧ 1-B ಯಲ್ಲಿ** ಪಟ್ಟಿ ಮಾಡಲಾದ ಬಾಹ್ಯ ನೆರವಿನ ಯೋಜನೆಗಳ ಅಡಿಯಲ್ಲಿ ಹಣವನ್ನು ಬಿಡುಗಡೆ ಮಾಡಲು ಹಣಕಾಸು ಇಲಾಖೆಯ ಸಹಮತಿ ಅಗತ್ಯವಾಗಿದೆ. ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಮುಂಗಡ ಹಣ ಮತ್ತು ರಾಜ್ಯ ಸರ್ಕಾರವು ಮುಂದೆ ಬಿಡುಗಡೆ ಮಾಡಬೇಕಾದ ಬಾಕಿ ಮರುಪಾವತಿಗೆ ಸಂಬಂಧಿಸಿದಂತೆ ಬಾಹ್ಯ ಧನಸಹಾಯ ಏಜೆನ್ಸಿಗಳಿಂದ ಪಡೆದ ಮರುಪಾವತಿಯ ವಿವರಗಳೊಂದಿಗೆ ಆಡಳಿತ ಇಲಾಖೆಯು ಹಣಕಾಸು ಇಲಾಖೆಗೆ ಪ್ರಸ್ತಾನೆಯನ್ನು ಕಳುಹಿಸಬೇಕು.

**ಬಿ) ಆರ್.ಐ.ಡಿ.ಎಫ್ ಯೋಜನೆಗಳು/ಎ.ಐ.ಬಿ.ಪಿ**

24. ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ 4ನೇ ತ್ರೈಮಾಸಿಕ ಕಂತಿನಲ್ಲಿ ಆಯವ್ಯಯ ಅವಕಾಶದ ಶೇ 25ರಷ್ಟನ್ನು ಬಿಡುಗಡೆ ಮಾಡಬಹುದಾಗಿದೆ. ಆದರೆ ಈ ರೀತಿ ಬಿಡುಗಡೆ ಮಾಡುವಾಗ ಪ್ರಾರಂಭಿಕ ಶಿಲ್ಕು ಸೇರಿದಂತೆ ಹಿಂದಿನ ಬಿಡುಗಡೆಗಳ ಕನಿಷ್ಠ ಶೇ.75 ರಷ್ಟು ವೆಚ್ಚವಾಗಿರುವುದನ್ನು ಹಾಗೂ ಅದಕ್ಕೆ ಸಂಬಂಧಿಸಿದಂತೆ ವೆಚ್ಚ ಮರುಪಾವತಿ ಕೋರಿ ಭಾರತ ಸರ್ಕಾರಕ್ಕೆ ಸಲ್ಲಿಸುವ ಕ್ಷೇಮಿನ ಅಂತರ ಒಂದು ತಿಂಗಳಿಗಿಂತ ಹೆಚ್ಚಾಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಈ ಕುರಿತು ಹೊರಡಿಸಲಾಗುವ ಸರ್ಕಾರದ ಆದೇಶಗಳಲ್ಲಿ ಮೇಲಿನ ಅಂಶಗಳು ಸೇರಿರತಕ್ಕದ್ದು.

**ಸಿ) ಮರುಪಾವತಿ ಕ್ಲೇಮುಗಳ ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ**

25. ಭಾರತ ಸರ್ಕಾರಕ್ಕೆ, ಬಾಹ್ಯ ನಿಧಿ ಪೂರೈಕೆ ಏಜೆನ್ಸಿಗಳಾದ ವಿಶ್ವ ಬ್ಯಾಂಕ್, ಎ.ಡಿ.ಬಿ., ಜೆ.ಐ.ಸಿ.ಎ., ಮುಂತಾದವುಗಳಿಗೆ ಹಾಗೂ ಕಂಡಿಕೆ-23 ರಲ್ಲಿ ಉಲ್ಲೇಖಗೊಂಡ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ದೇಶೀಯ ಆರ್ಥಿಕ ಸಂಸ್ಥೆಗಳಾದಂತಹ ನಬಾರ್ಡ್ ಮುಂತಾದವುಗಳಿಗೆ ಮರುಪಾವತಿ ಕ್ಷೇಮುಗಳು ಮತ್ತು ಬಳಕೆ ಪ್ರಮಾಣಪತ್ರಗಳು ಸಲ್ಲಿಕೆಯಾಗಬೇಕಾದ ಯೋಜನೆಗಳಿಗೆ ಸಂಬಂಧಿಸಿದಂತೆ, ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು, ಈ ಯೋಜನೆಗಳ ನೈಜ ವೆಚ್ಚ ಮತ್ತು ಮರುಪಾವತಿ ಕ್ಲೇಮುಗಳ ಅಥವಾ ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ ನಡುವಿನ ಸಮಯದ ಅಂತರವು 1 ತಿಂಗಳ ಮೇಲಾಗದಂತೆ ಮತ್ತು ಕ್ಷೇಮುಗಳ ಮುಂದಿನ ಕಂತಿನ ಬಿಡುಗಡೆಗಳನ್ನು ಭಾರತ ಸರ್ಕಾರ/ಸಂಬಂಧಿತ ನಿಧಿ ಪೂರೈಕೆ ಏಜೆನ್ಸಿಗಳೊಂದಿಗೆ ತ್ವರಿತವಾಗಿ ಹಿಂಬಾಲಿಕಾ ಕ್ರಮವಹಿಸಬೇಕಾಗುತ್ತದೆ.

**ಕೇಂದ್ರದ ನೆರವಿನ ರಾಜ್ಯ ಕಾರ್ಯಕ್ರಮಗಳು ಮತ್ತು ಇತರೆ ಕೇಂದ್ರ ಪುರಸ್ಕೃತ ಯೋಜನೆಗಳು**

26. **ಅನುಬಂಧ-1** ರಲ್ಲಿನ ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯತಕ್ಕದ್ದು.

27. ಈ ತರಹದ ಯೋಜನೆಗಳಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲನ್ನು ಅಂಗೀಕೃತ ಮಾದರಿ ಹಂಚಿಕೆ ಅನ್ವಯ, ಕೇಂದ್ರದ ಪಾಲು ಸ್ವೀಕೃತವಾಗಿರುವ ಬಗ್ಗೆ ಆರ್ಥಿಕ ಇಲಾಖೆಯಿಂದ ತಿಳಿಸಲಾಗುವ ಜಮಾ ದೃಢೀಕರಣ ಪತ್ರದ ಪ್ರಕಾರ ಆಯವ್ಯಯ ಲಭ್ಯತೆಗೊಳಪಟ್ಟು ಬಿಡುಗಡೆ ಮಾಡಬಹುದು. **ಆದರೆ ಕೆಲವು ಆಡಳಿತ ಇಲಾಖೆಗಳು ಕೇಂದ್ರದಿಂದ ಬಿಡುಗಡೆಯನ್ನು ನಿರೀಕ್ಷಿಸಿ ತಮ್ಮ ಹಂತದಲ್ಲಿಯೇ ಕೇಂದ್ರ ಮತ್ತು ರಾಜ್ಯದ ಪಾಲಿನ ಬಿಡುಗಡೆ ಮಾಡುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿದ್ದು, ಇದನ್ನು ತಕ್ಷಣದಿಂದ ನಿಲ್ಲಿಸುವುದು. ತದ ನಂತರದಲ್ಲಿ ಇಂತಹ ಯಾವುದೇ ಪ್ರಕರಣಗಳು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಲ್ಲಿ ಈ ಯೋಜನೆಯಡಿ ಮುಂದಿನ ಬಿಡುಗಡೆಗಳನ್ನು ನಿಲ್ಲಿಸಲಾಗುವುದು ಮತ್ತು ಈ ಸಂಬಂಧ ನೀಡಿರುವ ಆರ್ಥಿಕ ಅಧಿಕಾರವನ್ನು ಹಿಂಪಡೆಯಲಾಗುವುದು.** ಬಿಡುಗಡೆ ಸಂಬಂಧ ಹೊರಡಿಸುವ ಸರ್ಕಾರಿ ಆದೇಶವು ಮಾದರಿ ಹಂಚಿಕೆಯ ವಿವರಗಳು, ಹಿಂದಿನ ಕೇಂದ್ರ ಮತ್ತು ರಾಜ್ಯ ಪಾಲಿನ ಬಿಡುಗಡೆಗಳು, ರಾಜ್ಯ ಸರ್ಕಾರಕ್ಕೆ ಜಮೆಯಾದ ಕೇಂದ್ರದ ಸ್ವೀಕೃತಿಗಳು ಮತ್ತು ಇದಕ್ಕನುಗುಣವಾಗಿ ಬಿಡುಗಡೆಗೊಳಿಸಲು ಉದ್ದೇಶಿಸಿರುವ ರಾಜ್ಯದ ಪಾಲು - ಈ ವಿವರಗಳನ್ನು ಒಳಗೊಂಡಿರಬೇಕು.

28. ಭಾರತ ಸರ್ಕಾರದಿಂದ ಕೇಂದ್ರದ ಪಾಲಿನ ಬಿಡುಗಡೆಯಾಗಿದ್ದು ರಾಜ್ಯ ಸರ್ಕಾರದ ಲೆಕ್ಕಕ್ಕೆ ಜಮೆಯಾಗುವ ಮುನ್ನ ಕೇಂದ್ರ ಮತ್ತು ರಾಜ್ಯದ ಪಾಲಿನ ಹಣವನ್ನು ಬಿಡುಗಡೆ ಮಾಡಬೇಕಾದಲ್ಲಿ, ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ವಿಶೇಷಾಧಿಕಾರಿ (ಎಫ್.ಆರ್.ಸಿ. ಮತ್ತು ಸಿ.ಸಿ.) ಯವರಿಗೆ ಕಳುಹಿಸತಕ್ಕದ್ದು. ಭಾರತ ಸರ್ಕಾರದಿಂದ ಬಿಡುಗಡೆಗೊಂಡ ಹಣದ ಆದೇಶ ಮತ್ತು ಆಯವ್ಯಯ ಅನುದಾನದಲ್ಲಿನ ಬಾಕಿಯ ವಿವರಗಳನ್ನು ಪ್ರಸ್ತಾವನೆಗಳು ಒಳಗೊಂಡಿರಲೇಬೇಕು.

29. ಲಭ್ಯವಿರುವ ಆಯವ್ಯಯ ಅನುದಾನವು ಕೇಂದ್ರ ಮತ್ತು ರಾಜ್ಯದ ಪಾಲನ್ನು ಬಿಡುಗಡೆಗೊಳಿಸಲು ಸಾಕಾಗದಿದ್ದಲ್ಲಿ, ಮೇಲೆ (1) ರಲ್ಲಿ ಓದಲ್ಪಟ್ಟ ಸರ್ಕಾರಿ ಆದೇಶದಂತೆ ಪುನರ್ವಿನಿಯೋಗ ಅಥವಾ ಪೂರಕ ಅಂದಾಜುಗಳಲ್ಲಿ ಹೆಚ್ಚುವರಿ ಅನುದಾನ ಅವಕಾಶ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕು.

**ವೇತನ ಅನುದಾನ ಹೊಂದಿರುವ ಕೇಂದ್ರ ಪುರಸ್ಕೃತ ಯೋಜನೆಗಳು:**

30. ಅನುಬಂಧ-1A ರಲ್ಲಿ ಪಟ್ಟಿ ಮಾಡಿರುವ ಕೇಂದ್ರ ಪುರಸ್ಕೃತ ಯೋಜನೆಗಳಡಿ ಹಣ ಬಿಡುಗಡೆ ಮಾಡುವಾಗ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯುವುದು ಅವಶ್ಯಕವಾಗಿದೆ.

31. ಅನುಬಂಧ-1-A ರಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರದ ಸೂಚನೆಯನುಸಾರ ಕೇಂದ್ರದ ಪಾಲಿನ ಪೂರ್ಣ ಅನುದಾನ ಹಾಗೂ ರಾಜ್ಯದ ಪಾಲಿನ ಅನುದಾನವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಂದ ಈ ಉದ್ದೇಶಕ್ಕಾಗಿ ತೆರೆದಿರುವ Single Nodal Agency(SNA) ಖಾತೆಗಳಿಗೆ ವರ್ಗಾಯಿಸಬೇಕಾಗುತ್ತದೆ. ಜೊತೆಗೆ, ಕೇಂದ್ರ ಪುರಸ್ಕೃತ ಯೋಜನೆಗಳಡಿ ಭರಿಸುವ ವೇತನ ವೆಚ್ಚಗಳನ್ನು ರಾಜ್ಯ ಸರ್ಕಾರದಿಂದ ಖಜಾನೆ ಮೂಲಕ ಪ್ರತ್ಯೇಕ ಲೆಕ್ಕ ಶೀರ್ಷಿಕೆಗಳಡಿ ಭರಿಸಲಾಗುತ್ತದೆ. ಖಜಾನೆ ಮೂಲಕ ಈ ವೇತನ ಲೆಕ್ಕ ಶೀರ್ಷಿಕೆಗಳಡಿ ಭರಿಸಲಾಗುವ ಒಟ್ಟು ವೆಚ್ಚಗಳನ್ನು SNA ಬ್ಯಾಂಕ್ ಖಾತೆಗಳಿಂದ ರಾಜ್ಯ ಸರ್ಕಾರದ ಸಂಚಿತ ನಿಧಿಗೆ ಹಿಂಬರಿಸಲಾಗುತ್ತದೆ.

32. ಕೇಂದ್ರ ಸರ್ಕಾರವು ವೇತನಾನುದಾನವನ್ನು ಬಿಡುಗಡೆ ಮಾಡಿದ ತಕ್ಷಣ ಇದನ್ನು SNA ಖಾತೆಗೆ ಕೂಡಲೇ ವರ್ಗಾಯಿಸಬೇಕಾಗುತ್ತದೆ ಹಾಗೂ ಅದೇ ಮೊತ್ತವನ್ನು ರಾಜ್ಯದ ಸಂಚಿತ ನಿಧಿಗೆ ಮರುಪಾವತಿ ಮಾಡಬೇಕಾಗುತ್ತದೆ. SNA ಖಾತೆಗೆ ವರ್ಗಾಯಿಸಲಾದ ವೇತನಾನುದಾನದ ಮೊತ್ತವನ್ನು ಯಾವುದೇ ಇತರೆ ಕಾರ್ಯಕ್ರಮಕ್ಕೆ ಅಥವಾ ಯಾವುದೇ ವೆಚ್ಚಗಳಿಗೆ ಉಪಯೋಗಿಸುವಂತಿಲ್ಲ.

**<u>ಕೇಂದ್ರ ಹಣಕಾಸು ಆಯೋಗ ಅನುದಾನಗಳು</u>**

33. ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡುವ 15ನೇ ಆರ್ಥಿಕ ಆಯೋಗದ ಅನುದಾನಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಮೂಲಭೂತ ಅನುದಾನ ಮತ್ತು ಸಾಮಾನ್ಯ ಕಾರ್ಯಕ್ಷಮತೆ ಅನುದಾನಗಳಿಗೆ ಯಾವುದೇ ಕ್ರಿಯಾ ಯೋಜನೆಯ ಅನುಮೋದನೆ ಅಗತ್ಯವಿರುವುದಿಲ್ಲ ಮತ್ತು ಅನುದಾನ ಸ್ವೀಕೃತಿಯಾದ 10 ದಿನಗಳೊಳಗೆ ಈ ಮೊತ್ತವನ್ನು ಬಿಡುಗಡೆ ಮಾಡತಕ್ಕದ್ದು.

**<u>ಭಾಗ- IV ಸಾಮಾನ್ಯ ಸೂಚನೆಗಳು</u>**

**ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆ**

34. ಯಾವುದೇ ನಿರ್ದಿಷ್ಟ ವರ್ಗಾವಣೆ ಅಥವಾ ಪೂರ್ತಿ ಯೋಜನೆಗಾಗಿ ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿದ್ದಲ್ಲಿ ಮಾತ್ರ ಅಂತಹ ಮೊತ್ತಗಳನ್ನು ಬ್ಯಾಂಕ್ ಖಾತೆ ಅಥವಾ ವೈಯಕ್ತಿಕ ಠೇವಣಿ ಖಾತೆ (ಪಿ.ಡಿ. ಅಕೌಂಟ್) ಯಲ್ಲಿ ಜಮಾ ಮಾಡಬಹುದಾಗಿದೆ.

35. ಅನುಷ್ಠಾನ ಸಂಸ್ಥೆಯ/ ಅಧಿಕಾರಿಯ ಬ್ಯಾಂಕ್ ಖಾತೆ ಅಥವಾ ವೈಯಕ್ತಿಕ ಠೇವಣಿ ಖಾತೆಗೆ ಒಂದು ನಿರ್ದಿಷ್ಟ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಣವನ್ನು ಜಮೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿದ್ದರೂ ಸಹ, ಅದನ್ನು ಈ ಹಣಕಾಸು ಪ್ರತ್ಯಾಯೋಜನೆಯ ಅಧಿಕಾರವನ್ನು ಚಲಾಯಿಸುವುದರಿಂದ ವಿನಾಯಿತಿ ಎಂದು ಪರಿಭಾವಿಸುವಂತಿಲ್ಲ.

ಆಥಿಕ ಇಲಾಖೆಯು ಇಲಾಖಾಧಿಕಾರಿಗಳ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯಲ್ಲಿನ ವ್ಯವಹಾರಗಳನ್ನು ಖಜಾನೆಯ NTT Module ಮೂಲಕ ಪರಿಶೀಲಿಸುವುದರಿಂದ ಆಡಳಿತ ಇಲಾಖೆಯು ಆರ್ಥಿಕ ಅಧಿಕಾರ ಉಪಯೋಗಿಸಿ ಹಣ ಬಿಡುಗಡೆ ಮಾಡುವಾಗ ಇಂತಹ ಬ್ಯಾಂಕ್/ ವೈಯಕ್ತಿಕ ಠೇವಣಿ ಖಾತೆಯಲ್ಲಿ ಉಳಿದಿರುವ ಶಿಲ್ಕು ಹಾಗೂ ನೈಜ ವೆಚ್ಚ ಇವುಗಳನ್ನು ಪರಿಗಣಿಸಿಯೇ ಹಣ ಬಿಡುಗಡೆ ಮಾಡಬೇಕಾಗುತ್ತದೆ.

36. ಕೇಂದ್ರ ಅಥವಾ ರಾಜ್ಯದ ಯಾವುದೇ ಕಾರ್ಯಕ್ರಮದಡಿ ಜಾರಿಗೊಳಿಸುವ ಏಜೆನ್ಸಿಗಳಿಗೆ ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆಯ ಮುಖಾಂತರ ಹಣ ಬಿಡುಗಡೆ ಮಾಡಬೇಕಾದಲ್ಲಿ, ಹಿಂದೆ ಬಿಡುಗಡೆಯಾದ ಹಣದಲ್ಲಿ, ಅನುಷ್ಠಾನ ಸಂಸ್ಥೆ/ಅಧಿಕಾರಿಯ ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆಯಲ್ಲಿನ ಆರಂಭಿಕ ಶಿಲ್ಕನ್ನೂ ಒಳಗೊಂಡಂತೆ, ಈವರೆಗೆ ಬಿಡುಗಡೆ ಮಾಡಿರುವ ಹಣದಲ್ಲಿ ಶೇ.75 ರಷ್ಟು ಹಣವನ್ನು ಉಪಯೋಗಿಸಿಕೊಂಡಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಹಣ ಬಿಡುಗಡೆಯ ಸರ್ಕಾರಿ ಆದೇಶವು ಈ ಕೆಳಕಂಡ ಅಂಶಗಳನ್ನು ತಪ್ಪದೇ ಒಳಗೊಳ್ಳತಕ್ಕದ್ದು:
   - ಆರಂಭಿಕ ಶಿಲ್ಕು
   - ಇತ್ತೀಚಿನ ಸರ್ಕಾರಿ ಆದೇಶದಲ್ಲಿ ಮಾಡಿದ ಬಿಡುಗಡೆಗಳು
   - ಲಭ್ಯವಿರುವ ಒಟ್ಟು ಮೊತ್ತ
   - ಆಗಿರುವ ವೆಚ್ಚ
   - ಲಭ್ಯವಿರುವ ಮೊತ್ತಕ್ಕೆ ಶೇಕಡಾವಾರು ವೆಚ್ಚ

37. ಬಂಡವಾಳ ಅಥವಾ ರಾಜಸ್ವ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆಯಾಗುವ ಹಣವನ್ನು ವೈಯಕ್ತಿಕ ಠೇವಣಿ ಖಾತೆಯಲ್ಲಿ ಜಮಾ ಮಾಡಲು ಸಾಮಾನ್ಯವಾಗಿ ಅನ್ವಯವಾಗುವ ನಿರ್ಬಂಧಗಳು **ರಾಷ್ಟ್ರೀಯ ಅಥವಾ ರಾಜ್ಯ ವಿಪತ್ತು ಪರಿಹಾರ ಉಪಬಂಧಗಳಿಗೆ** ಅನ್ವಯವಾಗುವುದಿಲ್ಲ.

**ಆರ್ಥಿಕ ಇಲಾಖೆಗೆ ತಿಳಿಸುವುದು:**

38. ಆಡಳಿತ ಇಲಾಖೆಗಳು ಈ ಆರ್ಥಿಕ ಪ್ರತ್ಯಾಯೋಜನೆಗಳನ್ವಯ ಹೊರಡಿಸುವ ಹಣ ಬಿಡುಗಡೆ ಆದೇಶದ ಪ್ರತಿಗಳನ್ನು ತಪ್ಪದೇ ಆರ್ಥಿಕ ಇಲಾಖೆಯ ಸಂಬಂಧಿತ ವೆಚ್ಚ ಶಾಖೆಗಳಿಗೆ ಕಳುಹಿಸುವುದು.

**ಖಜಾನೆ ಇಲಾಖೆಯ ಪಾತ್ರ:**

39. (ಎ) ಈ ಸಂಬಂಧ ಮೇಲ್ಕಾಣಿಸಿದ ವಿವರಗಳನ್ವಯ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುವುದನ್ನು ಗಮನಿಸದೇ ಖಜಾನೆ ಇಲಾಖೆಯು ಆಡಳಿತ ಇಲಾಖೆಗಳು ಸಲ್ಲಿಸುವ ಬಿಲ್ಲುಗಳನ್ನು ಅಂಗೀಕರಿಸತಕ್ಕದ್ದಲ್ಲ ಮತ್ತು ಹಣ ಬಿಡುಗಡೆ ಮಾಡತಕ್ಕದ್ದಲ್ಲ.

(ಬಿ) ಕೇಂದ್ರ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯು ಹೊರಡಿಸುವ Credit Confirmation Slip ಅನ್ನು ಪರಿಶೀಲಿಸದೆ ಯಾವುದೇ ಬಿಲ್ಲುಗಳನ್ನು ಮಾನ್ಯ ಮಾಡತಕ್ಕದ್ದಲ್ಲ.

(ಸಿ) ಹಾಗೆಯೇ, ಆರ್ಥಿಕ ಇಲಾಖೆಯ ತ್ರೈಮಾಸಿಕ ಕಂತುಗಳ ಹಣ ಬಿಡುಗಡೆ ಆದೇಶದ ಅನುಬಂಧ-1 ರಲ್ಲಿರುವ ಪ್ರತ್ಯಾಯೋಜನೆ ಮಾಡಿರದ ಯೋಜನೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯಿಂದ ನಿರ್ದಿಷ್ಟ ಅನುಮೋದನೆ ನೀಡಿದ ಹಿಂಬರಹವನ್ನು ಪರಿಶೀಲಿಸಿದ ನಂತರವೇ ಬಿಲ್ಲುಗಳನ್ನು ಅಂಗೀಕರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ

Ekroop Caur

**(ಡಾ:ಏಕ್ ರೂಪ್ ಕೌರ್)**
ಸರ್ಕಾರದ ಕಾರ್ಯದರ್ಶಿ (ಆ ಮತ್ತು ಸಂ)
ಆರ್ಥಿಕ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು,(ಎ&ಇ)/ ಪ್ರಧಾನ ಮಹಾಲೇಖಪಾಲರು, (ಸಿ&ಸಿಎ),/ಮಹಾಲೇಖಪಾಲರು (ಆಡಿಟ್-II),ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
8. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

9. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560 001.
10. ಹೆಚ್ಚುವರಿ ನಿರ್ದೇಶಕರು, ಖಜಾನೆ-2, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
11. ಜಿಲ್ಲಾ ಖಜಾನಾಧಿಕಾರಿಗಳು.
12. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ ಕಾರ್ಯದರ್ಶಿಗಳು ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು.
13. ಆರ್ಥಿಕ ಇಲಾಖೆಯ ಎಲ್ಲಾ ಶಾಖೆಗಳಿಗೆ.
14. ರಾಜ್ಯ ಪತ್ರ/ ಬಿಡಿ ಪ್ರತಿ / ಶಾ.ರ.ಕ.

| Annexure - 1 | | |
|---|---|---|
| **FY 2022-23** | | |
| **List of HOAs for which Finance Department's Prior Concurrence is necessary for release of funds** | | |
| **Demand No. and Department** | **HOA** | **Description** |
| 01-Agriculture | 2401-00-800-1-05 | Pradhan Mantri Kisan Samman Yojane |
| 02-Animal Husbandry & Fisheries | 4403-00-190-0-03 | Equity to Karnataka Milk Federation |
| | 4405-00-104-0-02 | Rennovation of Fishing Harbours, Landing Centres & Dredging Works |
| 06-Infrastructure | 5051-02-211-0-02 | CSS-Central Share of Sagarmala Project Dredging Works and Break Water Works |
| | 5051-02-211-0-03 | CSS-State Share of Sagarmala Project Dredging Works and Break Water Works |
| | 5465-01-190-3-04 | KRIDE - ROB/RUB Projects |
| 07-RDPR | 2215-01-102-9-08 | CSS Central Share - Jal Jeevan Mission (Rural Water Supply Scheme) |
| | 2215-01-102-9-10 | CSS State Share - Jal Jeevan Mission (Rural Water Supply Scheme) |
| 08- Forest | 4406-01-101-0-02 | Flexi Fund |
| 09-Cooperation | 2425-00-108-0-57 | Yashaswini |
| | 3475-00-107-0-20 | Minimum Floor Price Scheme |
| | 6408-02-190-1-01 | Loans to Karnataka State Warehousing Corporation -RIDF |
| 10-SC Welfare | 2225-01-102-0-11 | Community Irrigation Scheme - Ganga Kalyana |
| | 2225-01-190-2-01 | Self Employment Scheme |
| | 2225-01-190-2-09 | Micro Credit to S.Cs through Self Help Women Groups (SHGs) |
| | 2225-01-190-2-10 | Karnataka Thanda Development Corporation |
| | 2225-01-190-3-01 | Karnataka Adi Jambava Development Corporation |
| | 2225-01-283-0-10 | Dr. B.R.Ambedkar Housing Scheme (through RGHCL) |
| 10-ST Welfare | 2225-02-102-0-04 | Ganga Kalyana - for Schedule Tribe |
| | 2225-02-190-2-01 | Self Employment Scheme |
| | 2225-02-190-2-07 | Micro Credit to S.Ts through Self Help Women Groups (SHGs) |
| | 2225-02-283-0-05 | Housing Scheme of Karnataka Maharshi Valmiki ST Development Corp Ltd. (through RGHCL) |
| 10-BC Welfare | 2225-03-190-0-04 | D. Devaraja Urs Backward Classes Development Corporation Limited |
| | 2225-03-190-0-05 | Vishwakarma Abhivruddhi Nigama |
| | 2225-03-190-0-07 | Assistance to Nijasharana Ambigara Chowdaiah Development Corporation Ltd. |
| | 2225-03-190-0-08 | Assistance to Karnataka Uppara Development Corporation Ltd. |
| | 2225-03-190-0-09 | Karnataka Veerashaiva-Lingayata Development Corporation |
| | 4225-03-277-2-06 | Construction of Hostel Buildings (BCW Department) |
| | 2225-03-190-0-10 | Karnataka Vokkaliga Development Corporation |
| | 2225-03-190-0-06 | Kranthiveer Sangolli Rayanna Kshetra Abhivruddhi Pradhikaara |

| | | |
|---|---|---|
| 10-Minority Welfare | 4225-04-102-0-01 | Minority Slums/Colony Development Programme in 11 Corporations |
| | 2225-04-102-0-01 | Karnataka Minority Development Corporation |
| | 2225-04-102-0-02 | CSS-Central Share Pradana Mantri Jana Vikasa Programme |
| | 2225-04-102-0-08 | CSS-State Share Pradana Mantri Jana Vikasa Programme |
| 11-Women and Child Development | 2235-02-103-0-38 | Women Development Corporation-Udyogini |
| 12-Youth Services | 2204-00-103-0-27-059 | Implementation of Youth Policy |
| 14-Revenue | 2250-00-103-2-00-103 | Basava Kalyana Development Board |
| | 2250-00-103-1-00-103 | Kudalasangama Development Board |
| | 4059-80-051-0-56 | Establishment of Anubhava Mantapa |
| | 2250-00-103-8-00 | Kittoru Abhivruddhi Pradhikaara |
| 16-Housing | 2216-02-101-0-07 | Vajpayee Urban Housing Scheme |
| | 2216-03-104-0-01 | Ashraya-Basava Vasathi |
| | 2216-03-104-0-03 | Dr. B.R.Ambedkar Nivas Scheme |
| | 2216-07-800-0-04 | D.Devraj Urs Housing Scheme |
| 17-Primary & Secondary Education | 2202-01-109-0-03 | Vidya Vikasa Scheme- Incentive for Students |
| | 2202-01-196-6-01 | Universalization of Primary Education - Aksharadasoha |
| 18-Commerce & Industries | 2852-08-202-7-01 | Implementation of Garment Policy |
| 19-Urban Developoment | 2217-05-191-1-15 | CSS-State Share Smart City Mission |
| | 2217-05-191-8-01 | Reimbursement of Taxes and duties to BMRCL |
| | 2217-80-800-0-37 | CSS-State Share Swatch Bharat |
| | 3604-00-191-1-51-008(VPP),032,051,059 | General |
| | 3604-00-191-2-00 | Untied |
| | 3604-00-192-2-00 | Untied |
| | 3604-00-193-2-00 | Untied |
| | 4217-01-800-0-02 | Capital Support to Special Infrastructure Projects of Bangalore |
| | 4217-60-190-2-01 | Equity Investment (BMRCL) |
| | 4217-60-800-0-04 | Bangalore Sub Urban Rail System |
| | 6217-60-190-0-01 | Loans for BMRCL |
| | 6217-60-190-0-03 | Support to BMRCL for Debt Repayment |
| 20-Public Works | 5054-04-337-0-05 | Roads financed from Central Road Fund Allocation |
| 21-Major Irrigation | 4701-77-800-0-01 | CSS-Central Share-AIBP-Irrigation Projects under various Nigams |
| | 4701-77-800-0-02 | CSS-State Share-AIBP-Irrigation Projects under various Nigams |
| 22-Health and Family Welfare Department | 2210-01-104-0-02-180 | Procurement of disposable medical materials for Covid-19 through KSMSCL |
| | 2210-06-001-0-01-222 | Director of HFW services, HE &Training Centre, Engineering Division, Vector Borne Diseases |
| | 2210-06-001-0-01-221 | |
| | 4210-04-107-2-01-180 | Karnataka State Medical Supplies Corporation Ltd. |
| 23- Labour &Skill Development &Statistics | 2230-01-103-4-00 | Karnataka Labour Welfare Fund Contribution |
| 26-Planning, Programme | 4575-60-800-0-02 | Kalyana Karnataka Region Development |
| | 2575-60-265-0-03 | Kalyana Karnataka Region Development |
| **All Demands** | **Vacant Post Provisions** | |

| Annexure-1-A | | |
|---|---|---|
| **List of HOAs for which Finance Department's Prior Concurrence is necessary for release of funds** | | |
| **Demand-Department** | **HOA** | **Description** |
| 02-Animal Husbandry | 2403-00-113-0-07 | CSS-Central Share-Integrated Sample Survey for Estimation of Milk, Meat, Egg and Wool Products |
| | 2403-00-113-0-08 | CSS-State Share-Integrated Sample Survey for Estimation of Milk, Meat, Egg and Wool Products-Salary |
| 11-Women & Child Development | 2235-02-102-0-48 | CSS-Central Share-Integrated Child Protection Scheme (Mission Vaatsalya) |
| | 2235-02-102-0-49 | CSS-State Share- Integrated Child Protection Scheme(Mission Vaatsalya) |
| | 2235-02-102-0-50 | CSS-Central Share - ICDS District Cell |
| | 2235-02-102-0-51 | CSS-State Share- ICDS District Cell |
| | 2235-02-102-0-52 | CSS-Central Share-Integrated Child Development Service (204 ICDS Projects) |
| | 2235-02-102-0-53 | CSS-State Share-Integrated Child Development Service (204 ICDS Projects) |
| 17-Primary & Secondary Education | 2202-01-113-0-01 | CSS-State Share-Samagra Shikshana Karnataka |
| | 2202-01-113-0-02 | CSS-Central Share- Samagra Shikshana Abhiyana-Karnataka |
| 27-Law | 2014-00-103-0-06 | CSS-Central Share-Fast Track Special Courts for disposal of cases pending under Rape and POCSO Act |
| | 2014-00-103-0-07 | CSS-State Share-Fast Track Special Courts for disposal of cases pending under Rape and POCSO Act |

| Annexure-1-B | | |
|---|---|---|
| **Demand No. and Department** | **HOA** | **Description** |
| 01-Agriculture | 2402-00-103-0-06 | World Bank Assisted REWARD (Rejuvinating Watersheds for Agricultural Resilience through Innovative Development) Project-EAP |
| 19-Urban Developoment | 2217-05-191-1-87 | Karnataka Integrated Urban Water Management Investment Programme-Jalasiri EAP |
| | 4215-02-190-0-03 | Karnataka Urban Water Supply Modernisation Project-EAP |
| | 6215-01-190-2-86 | Bengaluru Water Supply and Sewerage Project(BWSSP) Phase III (Cauvery Water Supply Scheme-Stage-V)-EAP |
| Energy | 6801-00-205-1-05 | Bengaluru Smart Energy Efficient Power Distribution Project (ADB)-EAP |

# Annexure - 2

| | | |
|---|---|---|
| | **List of items of expenditure for which funds can be released up to Budget Provision presuming concurrence of Finance Department** | |
| | | |
| **Sl. No** | **List of Items of Expenditure** | **Object Head/Major Head/HOA** |
| 1 | Salary and Allowances | 001,002,003,004,005,011,014,020,101 |
| 2 | Payment to Dailywages/Contractual/Outsource | 033,034,035,115 |
| 3 | Office Expenses | 050 |
| 4 | Telephone Charges | 052 |
| 5 | Travelling Allowance | 041 |
| 6 | Building Expenses | 071 |
| 7 | Pensions to Grants-in-Aid | 118 |
| 8 | Transport Expenses | 195 |
| 9 | Purchase of medicines for hospitals, and veterinary institutions | 222 |
| 10 | Honorarium | 324 |
| 11 | Pension and Retirement Benefits | MH '2071 |
| 12 | Scholarships & Incentives | 117 |
| 13 | Social Security Pensions | 2235-02-101-0-20, 2235-60-001-0-02, 2235-60-102-1-01, 2235-60-102-1-05, 2235-60-102-1-06, 2235-60-102-1-07, 2235-60-102-1-08, 2235-60-102-1-09, 2235-60-102-2-01 |

| | | |
|---|---|---|
| 14 | Fixed Pension Schemes | 2235-60-200-1-99,<br>2220-60-105-0-01,<br>2205-00-102-1-18,<br>2235-60-102-3-01,<br>2235-60-107-0-08,<br>2235-60-102-2-01 |
| 15 | Pensions to ULB/Others | Object Head 251 under MH 3604 |
| | | |
| | | |
| | ಈ ಮೇಲೆ ನಮೂದಿಸಿದ ಲೆ.ಶೀ ಹಾಗು ಆಬ್ಜೆಕ್ಟ್ ಕೋಡ್ ಗಳನ್ನು ಹೊರತು ಪಡಿಸಿ ಇನ್ನೆಲ್ಲಾ ಲೆ.ಶೀ ಹಾಗು ಆಬ್ಜೆಕ್ಟ್ ಕೋಡ್ ಗಳಿಗೆ ಸಂಬಂದಿಸಿದಂತೆ ಇದೇ ಆದೇಶದ ಕಂಡಿಕೆ 9 ರಿಂದ 27 ರವರೆಗಿನ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. | For all the HoA and Object Heads, excluding those mentioned above, the directions given in this order at para from 9 to 27 are to be compulsorily followed, as the case may be. |
| | |  |

# Annexure-3

**List of Centrally Sponsored Schemes in District Sector(Paras 22-25) to be released by Concerned Administration Departments**

| Department | MPAS HOA | Description | Linkcode |
|---|---|---|---|
| RDPR | 2215-00-102-0-91 | CSS-Central Share-Swachha Bharath Mission (Grameena) | 2215-01-198-6-01 |
| RDPR | 2215-00-102-0-93 | CSS-State Share-Swachha Bharath Mission (Grameena) | 2215-01-198-6-02 |
| RDPR | 2230-00-101-0-01 | Rehabilitation of Bonded Labourers | 2230-01-198-6-01 |
| RDPR | 2505-00-101-0-11 | CSS-Central Share-Mahatma Gandhi National Rural Employment Assurance Scheme | 2505-60-196-6-04 |
| RDPR | 2505-00-101-0-12 | CSS-State Share-Mahatma Gandhi National Rural Employment Assurance Scheme | 2505-60-196-6-05 |
| RDPR | 2515-00-101-0-01 | DRDA - Administrative Charges | 2515-00-196-6-06 |
| RDPR | 2515-00-101-0-36 | XV FCG Grants to ZPs (60% Tied : 40% Basic) | 2515-00-196-6-12 |
| RDPR | 2515-00-102-0-70 | XV FCG - Grants to TPs (60% Tied : 40% Basic) | 2515-00-197-6-12 |
| RDPR | 2515-00-103-0-90 | XV FCG Grants to GPs (60% Tied : 40% Basic) | 2515-00-198-6-13 |
| SC Welfare | 2225-00-101-0-68 | CSS-Central Share- Pre-Matric Scholarship to SC Students | 2225-01-197-6-07 |
| SC Welfare | 2225-00-101-0-69 | CSS-State Share- Pre-Matric Scholarship to SC Students | 2225-01-197-6-08 |
| ST Welfare | 2225-00-102-0-07 | CSS-Central Share-Post-Matric Scholarships to ST Students | 2225-02-197-6-03 |
| ST Welfare | 2225-00-102-0-09 | CSS-Central Share- Pre-Matric Scholarship to ST Students | 2225-02-197-6-05 |
| ST Welfare | 2225-00-102-0-10 | CSS-State Share-Post-Matric Scholarships to ST Students | 2225-02-197-6-04 |
| ST Welfare | 2225-00-102-0-11 | CSS-State Share- Pre-Matric Scholarship to ST Students | 2225-02-197-6-06 |
| WCD | 2211-00-102-0-02 | CSS-State Share-ICDS District Cell | 2235-02-196-6-01 |
| WCD | 2211-00-102-0-03 | CSS-Central Share-ICDS District Cell | 2235-02-196-6-02 |
| WCD | 2211-00-102-0-22 | CSS-State Share-Integrated Child Development Service (204 ICDS Projects) | 2235-02-197-6-03 |
| WCD | 2211-00-102-0-23 | CSS-Central Share-Integrated Child Development Service (204 ICDS Projects) | 2235-02-197-6-04 |
| WCD | 2235-00-101-0-61 | CSS-Central Share-Integrated Child Development Service(SNP) | 2236-02-197-6-01 |
| WCD | 2235-00-101-0-62 | CSS-State Share-Integrated Child Development Service(SNP) | 2236-02-197-6-02 |
| Housing | 2216-00-102-0-14 | CSS-Central Share-Pradhan Mantri Awas Yojane Grameena | 2216-80-198-6-02 |
| Primary & Second | 2202-00-101-0-18 | State Programme for Ksheera Bhagya (MDM) | 2202-01-196-6-01 |
| Primary & Second | 2202-00-101-0-19 | Samagra Shikshana Karnataka - Teachers Salary | 2202-01-197-6-01 |
| Primary & Second | 2202-00-101-0-20 | CSS- Central Share- Mid Day Meal Program (MDM) | 2202-01-196-6-02 |
| Primary & Second | 2202-00-101-0-21 | CSS-State Share- Mid Day Meal Program (MDM) | 2202-01-196-6-03 |
| Primary & Second | 2202-00-102-0-20 | Samagra Shikshana - Teachers Salary | 2202-02-196-6-01 |
| Health | 2210-00-106-0-01 | District Family Welfare Bureau | 2211-00-196-6-02 |
| Health | 2210-00-106-0-02 | Rural Family Welfare Centres at PHCs | 2211-00-196-6-05 |
| Health | 2210-00-106-0-03 | Rural Sub-Centres (Opened Under Family Welfare) | 2211-00-196-6-06 |
| Skill Developmen | 2501-00-101-0-05 | CSS-Central Share-National Rural Livelihood Mission (NRLM) | 2501-06-198-6-01 |
| Skill Developmen | 2501-00-101-0-07 | CSS-State Share-National Rural Livelihood Mission (NRLM) | 2501-06-198-6-02 |

# Annexure-3

**List of Centrally Sponsored Schemes in District Sector(Paras 22-25) to be released by Concerned Administration Departments**

| Department | MPAS HOA | Description | Linkcode |
|---|---|---|---|
| Skill Developmen | 2501-00-101-0-08 | CSS-Central Share-Start Up Village Entrepreneurship Program -SVEP(NRLM) | 2501-06-198-6-03 |
| Skill Developmen | 2501-00-101-0-09 | CSS-State Share-Start Up Village Entrepreneurship Program -SVEP(NRLM) | 2501-06-198-6-04 |
| Skill Developmen | 2501-00-101-0-10 | CSS-Central Share-Rural Self Employment Training Institutes-RSETI (NRLM) | 2501-06-198-6-05 |
| Skill Developmen | 2501-00-101-0-14 | CSS-Central Share-National Rural Economic Transformation Project-NRETP (NRLM) | 2501-06-198-6-07 |
| Skill Developmen | 2501-00-101-0-15 | CSS-State Share-National Rural Economic Transformation Project-NRETP (NRLM) | 2501-06-198-6-08 |
| Skill Developmen | 2501-00-101-0-16 | CSS-Central Share-Deen Dayal Upadhaya Grameena Kaushalya Yojana -DDUGKY (NRLM) | 2501-06-198-6-09 |
| Skill Developmen | 2501-00-101-0-17 | CSS-State Share-Deen Dayal Upadhaya Grameena Kaushalya Yojana DDUGKY - (NRLM) | 2501-06-198-6-10 |